# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC: 1225/2023**

**PW-1**

| | | |
|---|---|---|
| ಸಾಕ್ಷಿಯ ಹೆಸರು | ಃ | ಶೇಖರ ನಲ್ಕೆ |
| ತಂದೆ ಹೆಸರು | ಃ | ಲೋಕಯ್ಯ |
| ಪ್ರಾಯ | ಃ | 42 ವರ್ಷ |
| ಉದ್ಯೋಗ | ಃ | ಕೆಲಸ ಇರುವುದಿಲ್ಲ |
| ವಾಸ | ಃ | ಮಿಯಾರು ಗ್ರಾಮ, ಕಾರ್ಕಳ |

ದಿನಾಂಕ **:07.12.2024** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀಮತಿ ಕೆ. ಎಸ್., ಶ್ರೀ ಎಸ್. ಎಸ್. ಎಮ್. ವಕೀಲರ ಪರವಾಗಿ ಅರ್ಜಿದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಅರ್ಜಿದಾರ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಉಡುಪಿ ನ್ಯಾಯಾಲಯದಲ್ಲಿ ದಾಖಲೆಗಳನ್ನು ಈಗಾಗಲೇ ಗುರುತಿಸಿದ್ದು, ಅವುಗಳನ್ನು ಪುನಃ ಈ ಕೆಳಗಿನಂತೆ ನಿಶಾನಿಕರಿಸಲಾಗುತ್ತದೆ. ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 1 ಎಂದು, ದೂರಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ನಿಪಿ - 2 ಎಂದು, ಸ್ಥಳ ಮಹಜರಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 3 ಎಂದು, ಕಚ್ಚಾ ನಕ್ಷೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 4 ಎಂದು, ಅದರ ಜೊತೆ ಇರುವ ಫೋಟೊವಿನ ದೃಢಿಕೃತ ನಕಲನ್ನು ನಿಪಿ - 4(ಎ) ಎಂದು, ಅಂತಿಮ ವರದಿಯ ದೃಢಿಕೃತ ನಕಲು ನಿಪಿ - 5 ಗಾಯದ ಪ್ರಮಾಣ ಪತ್ರ ದೃಢಿಕೃತ ನಕಲು ನಿಪಿ - 6 ಎಂದು, ಐಎಮ್ ವಿ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 7 ಎಂದು, ಕಲಂ 160ರ ನೋಟೀಸಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 8 ಎಂದು, ಒಟ್ಟು ನಾಲ್ಕು(4) ಬಿಲ್ಲುಗಳನ್ನು ನಿಪಿ - 9 ಎಂದು, ವಾಹನ ರಿಪೇರಿಯ ಬಿಲ್ಲನ್ನು ನಿಪಿ - 10 ಎಂದು, ಒಂದು ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ನಿಪಿ - 11 ಎಂದು, ವಾಹನ ಸರ್ವೇ ವರದಿ ನಿಪಿ - 12 ಎಂದು, ನನ್ನ ಆಧಾರ್ ಕಾರ್ಡನ್ನು ಮತ್ತು ಅದರ ನೋಟರೀಕೃತ ನಕಲನ್ನು ಹಾಜರುಪಡಿಸಿದ್ದೇನೆ. (ನೋಟರೀಕೃತ ನಕಲನ್ನು ಮೂಲಪ್ರತಿಯೊಂದಿಗೆ ಹೋಲಿಸಿ ನೋಡಿದ ನಂತರ ಮೂಲಪ್ರತಿಯನ್ನು ಸಾಕ್ಷಿಗೆ ಹಿಂತಿರುಗಿಸಲಾಯಿತು). ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿಪಿ - 13

ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲುಃ ಎದುರುದಾರರು ಈ ನ್ಯಾಯಾಲಯದಲ್ಲಿ ಹಾಜರಿರುವುದಿಲ್ಲ ಮತ್ತು ತಕರಾರು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,
ಕಾರ್ಕಳ.